### ಕರಜಗಿಯ ಶಿವಾನಂದ ಶರಣರ ಅಭಿಮತ । ಬಾಲಗಾಂವ ಗುರುದೇವ ಆಶ್ರಮದಲ್ಲಿ ಗುರುನಮನ ಕಾರ್ಯಕ್ರಮ ಆಯೋಜನೆ

# ಶತಮಾನದ ಸಂತ ಸಿದ್ಧೇಶ್ವರ ಶ್ರೀಗಳ ವಿಚಾರಧಾರೆ ಅನುಕರಣೀಯ

**ಹೊರ್ತಿ:** ಸಾರ್ಥಕ ಜೀವನಕ್ಕೆ ಗುರುಸ್ಮರಣೆ ಅವಶ್ಯಕತೆ ಇದೆ ಎಂದು ಕರಜಗಿಯ ಶಿವಾನಂದ ಶರಣರು ಹೇಳಿದರು.

ಸಮೀಪದ ಕಾತ್ರಾಳ, ಬಾಲಗಾಂವ ಗುರುದೇವ ಆಶ್ರಮದಲ್ಲಿ ಗುರುನಮನ ಕಾರ್ಯಕ್ರಮದ ಪ್ರಯುಕ್ತ 7 ದಿನಗಳವರೆಗೆ ನಡೆಯುವ ಆಧ್ಯಾತ್ಮಿಕ, ಗ್ರಾಮೀಣ ಸೊಗಡು, ಸಂಸ್ಕೃತಿ ಹಾಗೂ ಗುರುನಮನ ಮತ್ತು ವಿವಿಧ ಕಾರ್ಯಕ್ರಮಕ್ಕೆ ಸಿದ್ಧೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಉದ್ಘಾಟಿಸಿದರು.

ಗುರುವಿನ ಮಹಿಮೆ ಶ್ರೇಷ್ಠವಾದುದು. ಸಿದ್ಧೇಶ್ವರ ಶ್ರೀಗಳು ಎಲ್ಲರಿಗೂ ಜ್ಞಾನ ದಾಸೋಹ ನೀಡಿ ಸನ್ಮಾರ್ಗದ ದಾರಿ ತೋರಿದ್ದಾರೆ. ಅವರ ಹಾಕಿ ಕೊಟ್ಟ ಆಚಾರ, ವಿಚಾರದಂತೆ ನಾವೆಲ್ಲರೂ ಸಾಗಿ ಸುಂದರ ಜೀವನ ಕಂಡುಕೊಳ್ಳೋಣ ಎಂದರು.

ಲಮಾನಟ್ಟಿಯ ತುಕಾರಾಮ ಮಹಾರಾಜರು ಮಾತನಾಡಿ, ಗುರುಗಳ ಮಾರ್ಗದರ್ಶನದಿಂದ ಸುಂದರ ಜೀವನ ಕಂಡುಕೊಳ್ಳಲು ಸಾಧ್ಯ, ಸಮಯಕ್ಕೆ ಮಹತ್ವ ನೀಡಬೇಕು ಎಂದರು.

ಸೋನಿಹಾಳದ ಲಾಯಪ್ಪ ಮಹಾರಾಜರು ಹಾಗೂ ಸಂಗಡಿಗರು ಭಕ್ತಿ ಪದ ಹಾಡಿದರು. ಕಾತ್ರಾಳ-ಬಾಲಗಾಂವ ಗುರುದೇವ ಆಶ್ರಮದ ಅಮೃತಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಇದಕ್ಕೂ ಮುನ್ನ ಶಿವಲಿಂಗೇಶ ಬಾಲಗಾಂವ, ಸಾಯಬಣ್ಣ ಮುಚ್ಚಂಡಿ, ಕಾಶೀರಾಮ ಬಿರಾದಾರ, ರಮೇಶ ಕರೋಸಿ, ಶ್ರೀಕಾಂತ ಹಿರೇಮಠ ಸೇರಿ ಕಾತ್ರಾಳ, ಬಾಲಗಾಂವ ಬೋರ್ಗಿ, ಆಕಳವಾಡಿ, ಬೆಳ್ಳುಂಡಗಿ, ಹಳ್ಳಿ, ಗಿರಗಾಂವ, ಮಾನಿಕನಾಳ ಜೀಗಜಿವಣಿ, ಕನಕನಾಳ, ಇಂಚಗೇರಿ ಇತರರಿದ್ದರು.

ರಮೇಶ ಕರೋಸಿ ಸ್ವಾಗತಿಸಿ, ನಿರೂಪಿಸಿದರು. ಶ್ರೀಕಾಂತ ಹಿರೇಮಠ ವಂದಿಸಿದರು.

ವಿಜಯವಾಣಿ ಚಿತ್ರ

ಹೊರ್ತಿ ಸಮೀಪದ ಕಾತ್ರಾಳ, ಬಾಲಗಾಂವ ಗುರುದೇವಾಶ್ರಮದಲ್ಲಿ 7 ದಿನಗಳವರೆಗೆ ನಡೆಯುವ ಆಧ್ಯಾತ್ಮಿಕ, ಗ್ರಾಮೀಣ ಸೊಗಡು, ಸಂಸ್ಕೃತಿ ಹಾಗೂ ಗುರುನಮನ ಕಾರ್ಯಕ್ರಮಕ್ಕೆ ಶರಣರು ಮತ್ತು ಶ್ರೀಗಳು, ಮಹಾರಾಜ ಜೊತೆಯಾಗಿ ಸಿದ್ಧೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಉದ್ಘಾಟಿಸಿದರು. ಶಿವಾನಂದ ಶರಣರು, ತುಕಾರಾಮ ಮಹಾರಾಜರು, ಅಮೃತಾನಂದ ಸ್ವಾಮೀಜಿ ಇದ್ದರು.

ವಿಜಯವಾಣಿ ಚಿತ್ರ

**ಪರೀಕ್ಷೆಯಲ್ಲಿ ಸಾಧನೆ**

ತಾಲೂಕು ಮಟ್ಟದ ವಿವೇಕ ವಿದ್ಯಾರ್ಥಿ ಲಿಖಿತ ಪರೀಕ್ಷೆಯಲ್ಲಿ ಸಾಧನೆಗೈದ ವಿಜಯಪುರದ ಎಕ್ಸಲಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳೊಂದಿಗೆ ಶಾಲೆ ಪ್ರಾಚಾರ್ಯ ತುಳಜಾರಾಮ ಸುಕ್ತೆ ಮತ್ತಿತರರಿದ್ದಾರೆ.

## ಸುದ್ದಿ ಕಾರ್ನರ್

### ಎಕ್ಸಲಂಟ್ ವಿದ್ಯಾರ್ಥಿಗಳು ಜಿಲ್ಲಾಮಟ್ಟಕ್ಕೆ ಆಯ್ಕೆ

**ವಿಜಯಪುರ :** ನಗರದ ಎಕ್ಸಲಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ರಾಮಕೃಷ್ಣ ವಿವೇಕಾನಂದ ಭಾವ ಪ್ರಚಾರ ಪರಿಷತ್ ವತಿಯಿಂದ ಇತ್ತಿಚೆಗೆ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ವಿವೇಕ ವಿದ್ಯಾರ್ಥಿ ಲಿಖಿತ ಪರೀಕ್ಷೆಯಲ್ಲಿ ಅಮೋಘ ಸಾಧನೆಗೈದಿದ್ದಾರೆ. ಶಾಲೆಯ ವಿದ್ಯಾರ್ಥಿಗಳಾದ ಶ್ರೇಯಾ ಅಸ್ಕಿ ಪ್ರಥಮ ಸ್ಥಾನ, ಪೂರ್ವಿ ನಾಗರಳ್ಳಿ ದ್ವಿತೀಯ ಹಾಗೂ ಪ್ರತೀಕ್ಷಾ ರಾಠೋಡ ತೃತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ಶಿವಾನಂದ ಕೆಲೂರ, ಪ್ರಾಚಾರ್ಯ ತುಳಜಾರಾಮ ಸುಕ್ತೆ, ಶಿಕ್ಷಕ ವಿಠ್ಠಲ ದಳವಾಯಿ, ಪ್ರವೀಣ ಬಿರಾದಾರ ಅಭಿನಂದನೆ ಸಲ್ಲಿಸಿದ್ದಾರೆ.

### ಇಂದು ಬಜೆಟ್ ಪೂರ್ವಭಾವಿ ಸಭೆ

**ಮಹಾಲಿಂಗಪುರ:** ಸ್ಥಳೀಯ ಪುರಸಭೆ ಸಭಾಭವನದಲ್ಲಿ ಜ.9ರಂದು ಬೆಳಗ್ಗೆ 11 ಗಂಟೆಗೆ 2026-27ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆ ಜರುಗಲಿದೆ. ಪುರಸಭೆ ಆಡಳಿತಾಧಿಕಾರಿಯಾಗಿರುವ ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬಿಡೀಕರ ಸಭೆಯ ಅಧ್ಯಕ್ಷತೆ ವಹಿಸುವರು. ಜನಪ್ರತಿನಿಧಿಗಳು, ರಾಜಕೀಯ ಮುಖಂಡರು, ಸಂಘ ಸಂಸ್ಥೆಯವರು ಹಾಗೂ ಹಿರಿಯರು ಆಗಮಿಸಿ ಸಲಹೆ ಸೂಚನೆ ನೀಡಬೇಕೆಂದು ಪುರಸಭೆ ಮುಖ್ಯಾಧಿಕಾರಿ ಎನ್.ಎ.ಲಮಾಣಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಪ್ರಕರಣ ಹಿಂಪಡೆಯಲು ಸಿಎಂಗೆ ನಿವೇದನೆ

### ಶಿವಾನಂದ ಪಾಟೀಲ ಹೇಳಿಕೆ । ಸರ್ಕಾರಿ ವೈದ್ಯಕೀಯ ಕಾಲೇಜ್ ಘೋಷಣೆ । ಹೋರಾಟಗಾರರ ಬಂಧನಕ್ಕೆ ವಿಷಾದ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

'ಸರ್ಕಾರದಿಂದಲೇ ವೈದ್ಯಕೀಯ ಕಾಲೇಜ್ ಆಗಬೇಕೆಂಬುದು ನನ್ನದೂ ಒತ್ತಾಯವಿದೆ, ಹೀಗಾಗಿ ಹೋರಾಟಗಾರರಿಗೂ ಬೆಂಬಲಿಸಿದ್ದೇನೆ, ಈಗಲೂ ನನ್ನ ಮನಸ್ಸು ಹೋರಾಟಗಾರರ ಜೊತೆ ಇದೆ, ಹೋರಾಟಗಾರರ ತಪ್ಪು ಏನೂ ಇಲ್ಲ, ಹೋರಾಟದ ಸಂದರ್ಭದಲ್ಲಾದ ಅಚಾತುರ್ಯಕ್ಕೆ ವಿಷಾದಿಸುತ್ತೇನೆ, ಕೇಸ್ ಹಿಂಪಡೆಯಲು ಸಿಎಂ ಬಳಿ ನಿವೇದನೆ ಮಾಡುವೆ...' ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಪ್ರತಿಕ್ರಿಯಿಸಿದರು.

ಶಿವಾನಂದ ಪಾಟೀಲ

'ಹೋರಾಟಗಾರರನ್ನು ಪೇಮೆಂಟ್ ಗಿರಾಕಿ ಅನ್ನಬಾರದಿತ್ತು, ಹೋರಾಟದ ಹಿಂದೆ ನನ್ನ ಪಾತ್ರವಿದ್ದರೆ ಸಾಬೀತು ಪಡಿಸಿದರೆ ರಾಜೀನಾಮೆ ನೀಡಲು ಸಿದ್ಧ, ಈಗಾಗಲೇ ಸಿಎಂ ಸಿದ್ದರಾಮಯ್ಯ ಅವರು ಹಾವೇರಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ಘೋಷಿಸಿದ್ದು, ಇದರ ಕ್ರೆಡಿಟ್ ಸಹ ಹೋರಾಟಗಾರರಿಗೆ ಸಲ್ಲಬೇಕು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಪ್ರತಿಕ್ರಿಯೆ ನೀಡಿದರು.

ಹೋರಾಟಗಾರರ ಯಾವುದೇ ಷರತ್ ಇದ್ದರೂ ಆ ಪ್ರಕಾರವೇ ನಡೆದುಕೊಳ್ಳುವಂತೆ ಸಿಎಂ ಬಳಿ ವಿನಂತಿ ಮಾಡುವೆ. ಈ ಹಿಂದೆ ಸರ್ಕಾರಿ ವೈದ್ಯಕೀಯ ಕಾಲೇಜ್‌ಗಾಗಿ ಸದನದಲ್ಲಿಯೂ ಪ್ರಸ್ತಾಪಿಸಿದ್ದೇನೆ, ಬಜೆಟ್‌ನಲ್ಲಿಯೂ ಘೋಷಿಸಲಾಗಿದೆ, ಸಿಎಂ ಸಿದ್ದರಾಮಯ್ಯನವರೇ ಮಾತುಕೊಟ್ಟಿದ್ದಾರೆ, ಹೀಗಾಗಿ ಸರ್ಕಾರದಿಂದಲೇ ವೈದ್ಯಕೀಯ ಕಾಲೇಜ್ ಸ್ಥಾಪನೆಯಾಗಲಿದೆ, ವಿಜಯಪುರದಲ್ಲಿಯೂ ಸಿಎಂ ಘೋಷಣೆ ಮಾಡಲಿದ್ದು ಅದಕ್ಕಾಗಿ ಸಿಎಂ ಸಿದ್ದರಾಮಯ್ಯ ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ಸಚಿವರು ತಿಳಿಸಿದರು.

**ಬಜೆಟ್‌ನಲ್ಲಿ ಘೋಷಣೆ**

**ಈ ಹಿಂದೆ ಆರೋಗ್ಯ ಸಚಿವನಾಗಿದ್ದ ಸಂದರ್ಭದಲ್ಲೇ ವಿಜಯಪುರ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಕ್ಕೆ ಬೇಕಾದ ಎಲ್ಲ ಸಿದ್ಧತೆ ಮಾಡಿಕೊಂಡಿದ್ದೆ. ಆದರೆ ಅಷ್ಟರಲ್ಲಿ ಕುಮಾರಸ್ವಾಮಿ ಅವರ ಸರ್ಕಾರ ಪತನವಾಯ್ತು. ನಂತರ ಬಂದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಕಾಲೇಜು ಸ್ಥಾಪನೆಗೆ ನಿರ್ಧರಿಸಿತ್ತು. ಆದರೆ ಸಿದ್ದರಾಮಯ್ಯ ಅವರು 2014-15 ನೇ ಸಾಲಿನ ಬಜೆಟ್‌ನಲ್ಲಿ ಪ್ರತಿ ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಘೋಷಿಸಿದ್ದರು. ಇದೀಗ ಹಾವೇರಿಯಲ್ಲಿ ನಡೆದ ಸಮಾರಂಭದಲ್ಲಿ ವಿಜಯಪುರ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಘೋಷಿಸಿದ್ದು, ಅದಕ್ಕಾಗಿ ಮುಖ್ಯಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಮುಖ್ಯಮಂತ್ರಿಗಳು ಸರ್ಕಾರಿ ಕಾಲೇಜು ಘೋಷಣೆ ಕುರಿತು ಅನುಮಾನ ಬೇಡ, ಬರುವ ಬಜೆಟ್‌ನಲ್ಲಿ ಅನುದಾನದ ಅವಕಾಶ ಸಿಗಲಿದೆ ಎಂದರು.**

### ಕೇವಲ 100 ಕೋಟಿ ರೂ. ಸಾಕು

ಹಾವೇರಿಯಲ್ಲಿ ಕೇವಲ 56 ಎಕರೆ ಜಮೀನಿದ್ದು, ಯಾವುದೇ ಸೌಲಭ್ಯ ಇರಲಿಲ್ಲ. ಆದರೆ ನಾನು ಆ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡ ಬಳಿಕ ಸರ್ಕಾರಿ ವೈದ್ಯಕೀಯ ಕಾಲೇಜಿನ ಕಟ್ಟಡ ಪೂರ್ಣಗೊಳಿಸಿದ್ದೇನೆ. ಕಳೆದ ಲೋಕಸಭಾ ಚುನಾವಣೆ ಪೂರ್ವದಲ್ಲೇ ಬಹುತೇಕ ಕಾಮಗಾರಿ ಮುಗಿತ್ತು, ಆದರೆ ಸಂಸದ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರ್ಕಾರದ ಪಾಲೂ ಇರುವ ಕಾರಣ ಕೇಂದ್ರದ ಸಚಿವರು ಪಾಲ್ಗೊಳ್ಳಲು ಅವಕಾಶ ಆಗುವಂತೆ ಕಾರ್ಯಕ್ರಮ ಮಾಡೋಣ ಎಂದು ಮನವಿ ಮಾಡಿದ್ದರು. ಹೀಗಾಗಿ ಇದೀಗ ಲೋಕಾರ್ಪಣೆ ಮಾಡಿದ್ದೇವೆ ಎಂದು ವಿವರಿಸಿದರು.

ವಿಜಯಪುರ ಜಿಲ್ಲೆಯಲ್ಲಿ 153 ಎಕರೆ ಜಮೀನಿದ್ದು, ನಾನು ಆರೋಗ್ಯ ಸಚಿವನಾಗಿದ್ದಾಗ 150 ಹಾಸಿಗೆಯ ತಾಯಿ ಮಕ್ಕಳ ಆಸ್ಪತ್ರೆ, ಟ್ರಾಮಾ ಸೆಂಟರ್ ಸೇರಿ ಹಲವು ಸೌಲಭ್ಯ ಕಲ್ಪಿಸಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡಿದ್ದಲ್ಲದೇ ಕ್ಯಾನ್ಸರ್ ಚಿಕಿತ್ಸಾ ಘಟಕ ಸ್ಥಾಪಿಸಿದ್ದೇನೆ. ಈ ಕಾಮಗಾರಿ ಇನ್ನಷ್ಟೇ ಪೂರ್ಣಗೊಳ್ಳಬೇಕಿದೆ. ಇಷ್ಟೆಲ್ಲ ಸೌಲಭ್ಯಗಳನ್ನು ಹೊಂದಿರುವ ವಿಜಯಪುರ ಜಿಲ್ಲಾ ಆಸ್ಪತ್ರೆ ಪರಿಸರದಲ್ಲಿ ಸರ್ಕಾರ ಕೇವಲ 100 ಕೋಟಿ ರೂ. ವೆಚ್ಚದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಅವಕಾಶವಿದೆ ಎಂದರು.

4 ಬೋಧನೆ ಕೋಣೆ, ಒಂದು ಆಡಿಟೋರಿಯಂ, ಪರೀಕ್ಷಾ ಘಟಕ ಸ್ಥಾಪಿಸಿದರೆ 250 ಎಂಬಿಬಿಎಸ್ ಸೀಟ್‌ಗಳೊಂದಿಗೆ ವೈದ್ಯಕೀಯ ಕಾಲೇಜು ಸ್ಥಾಪಿಸಬಹುದು. ಹೊಸದಾಗಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ 6-7 ನೂರು ಕೋಟಿ ರೂ. ಅನುದಾನ ಬೇಕು. ವಿಜಯಪುರ ಜಿಲ್ಲೆಯಲ್ಲಿ ಎಲ್ಲ ಮೂಲ ಸೌಲಭ್ಯಗಳು ಈಗಾಗಲೇ ಇದ್ದು, ಕೇವಲ ನೂರು ಕೋಟಿ ರೂ. ಸಾಕು ಎಂದು ತಮ್ಮ ಕಾಲಾವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಇರುವ ಸುಲಭ ಅವಕಾಶಗಳನ್ನು ವಿವರಿಸಿದರು.

ಹಾವೇರಿಗಿರುವ ಆದ್ಯತೆ ವಿಜಯಪುರಕ್ಕೇಕಿಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಚಿವರು, ವಿಜಯಪುರ ಜಿಲ್ಲೆಯ ಉಸ್ತುವಾರಿ ಮಂತ್ರಿ ಮಾಡಿ ನಾನು ಮಾಡಿ ತೋರಿಸುತ್ತೇನೆ ಎಂದರು.

### ಬೀಳ್ಕೊಡುಗೆ ಸಮಾರಂಭ

**ಗುಳೇದಗುಡ್ಡ:** ಪಟ್ಟಣದ ಭಂಡಾರಿ ಹಾಗೂ ರಾಠಿ ಪಪೂ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಪಠ್ಯೇತರ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ಜ.10 ರಂದು ಬೆಳಗ್ಗೆ 10.30 ಗಂಟೆಗೆ ಮಹಾವಿದ್ಯಾಲಯದ ಸಾಂಸ್ಕೃತಿಕ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

# 11ಕ್ಕೆ ಬೃಹತ್ ಹಿಂದು ಸಮ್ಮೇಳನ, ಶೋಭಾಯಾತ್ರೆ

### ಶಾಸಕ ಸಿ.ಎಸ್. ನಾಡಗೌಡ ಅವರಿಗೆ ಆಮಂತ್ರಣ ನೀಡಿ ಆಹ್ವಾನ । ವಿವಿಧ ಮಠಾಧೀಶರು ಭಾಗಿ

■ ವಿಜಯವಾಣಿ ಸುದ್ದಿಜಾಲ ಮುದ್ದೇಬಿಹಾಳ

ಪಟ್ಟಣದ ವಿಬಿಸಿ ಹೈಸ್ಕೂಲ್ ಮೈದಾನದಲ್ಲಿ ಹಿಂದು ಸಮ್ಮೇಳನ ಸಂಚಾಲನ ಸಮಿತಿ ನೇತೃತ್ವದಲ್ಲಿ ಜ. 11 ರಂದು ನಡೆಯಲಿರುವ ಬೃಹತ್ ಹಿಂದು ಸಮ್ಮೇಳನ ಹಾಗೂ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳಲು ಸಮಿತಿ ಮುಖ್ಯಸ್ಥರು ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಿದರು.

ಸಮಿತಿ ಮುಖ್ಯಸ್ಥರಾದ ಪ್ರಭು ಕಡಿ ಹಾಗೂ ಡಾ. ವಿರೇಶ ಇಟಗಿ ಮಾತನಾಡಿ, ಭಾರತೀಯ ಸಂಸ್ಕೃತಿ, ಧರ್ಮ, ಪರಂಪರೆ ಉಳಿಸುವ ನಿಟ್ಟಿನಲ್ಲಿ ತಾಲೂಕಿನ ಎಲ್ಲ ಹಿಂದು ಸಮಾಜದ ಮುಖಂಡ ಬಾಂಧವರನ್ನು ವಿಶೇಷವಾಗಿ ಆಮಂತ್ರಿಸಿ, ಹಿಂದು ಸರ್ವ ಸಮಾಜ ಒಗ್ಗೂಡಿಸಿ, ಭಾರತ ಕಟ್ಟುವ ಉದ್ದೇಶದಿಂದ ಈ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ವಿಜಯವಾಣಿ ಚಿತ್ರ



ಮುದ್ದೇಬಿಹಾಳದ ವಿಬಿಸಿ ಹೈಸ್ಕೂಲ್ ಮೈದಾನದಲ್ಲಿ ಹಮ್ಮಿಕೊಂಡಿರುವ ಬೃಹತ್ ಹಿಂದು ಸಮ್ಮೇಳನ ಹಾಗೂ ಶೋಭಾಯಾತ್ರೆ ಕಾರ್ಯಕ್ರಮಕ್ಕೆ ಶಾಸಕ ಸಿ. ಎಸ್. ನಾಡಗೌಡ ಅವರಿಗೆ ಸಮಿತಿ ಮುಖ್ಯಸ್ಥರು ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಿದರು. ಪರುಶುರಾಮ ಪವಾರ, ವಿಕ್ರಮ ಓಸ್ವಾಲ್ ಇತರರಿದ್ದರು.

ನಾಡಿನ ವಿವಿಧ ಮಠಾಧೀಶರು, ಚಿಂತಕರು, ಸಾಹಿತಿಗಳು, ರಾಜಕೀಯ ಮುಖಂಡರು, ಮಹಿಳಾ ಸಂಘಟನೆ, ಹಿಂದು ಸಮಾಜದ ಸಂಘ-ಸಂಸ್ಥೆಗಳ ಮುಖಂಡರು ಭಾಗವಹಿಸುವರೆಂದು ತಿಳಿಸಿದರು.

ಮುಖಂಡರಾದ ಪರುಶುರಾಮ ಪವಾರ, ವಿಕ್ರಮ ಓಸ್ವಾಲ್, ಶ್ರೀಶೈಲ ದೊಡ್ಡಮನಿ, ಮಾಣಿಕ ದಂಡಾವತಿ, ಮುರುಳಿಕೃಷ್ಣ ವಡ್ಡೋಡಗಿ, ಪ್ರಭು ನಂದೇಪ್ಪನವರ, ಶ್ರೀಕಾಂತ ಹಿರೇಮಠ, ಸುಭಾಶ ಕುಲಕರ್ಣಿ, ನಿಂಗಪ್ಪ ಚೆಟ್ಟೇರ, ಸಂಗಮೇಶ ನಾವದಗಿ, ವಿರೇಶ ಢವಳಗಿ ಇತರರಿದ್ದರು.

# ಕೃಷಿಯನ್ನು ಲಾಭದಾಯಕ ಉದ್ಯಮವಾಗಿಸಿ

### ಶಾಸಕ ಯಶವಂತರಾಯಗೌಡ ಪಾಟೀಲ ಸಲಹೆ । ಕಬ್ಬಿನ ಬೆಳೆ ಕ್ಷೇತ್ರೋತ್ಸವ । ವಿಚಾರ ಸಂಕಿರಣ

■ ವಿಜಯವಾಣಿ ಸುದ್ದಿಜಾಲ ಇಂಡಿ

ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಕೃಷಿ ಚಟುವಟಿಕೆಗಳಲ್ಲಿ ನಿರಂತರ ಕಾರ್ಯೋನ್ಮುಖರಾದರೆ ಕೃಷಿ ಒಂದು ಉದ್ಯಮವಾಗಿ ಹೊರ ಹೊಮ್ಮುತ್ತದೆ. ಸರ್ಕಾರಕ್ಕೆ ರೈತರು ಸಾಲ ಮನ್ನಾ ಮಾಡುವಂತೆ ಮನವಿ ಮಾಡುವುದನ್ನು ನಿಲ್ಲಿಸಿ, ಉತ್ತಮ ಕೃಷಿ ಕೈಗೊಂಡು ಆರ್ಥಿಕವಾಗಿ ಸಬಲರಾಗಲು ಮುಂದಾಗಿ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ತಾಲೂಕಿನ ಲಚ್ಯಾಣ ಗ್ರಾಮದ ಅಹಿರಸಂಗ ರಸ್ತೆಯ ಶ್ರೀಮಂತ ಇಂಡಿ ಇವರ ತೋಟದಲ್ಲಿ ಇತ್ತೀಚೆಗೆ ಕೃಷಿ ಇಲಾಖೆ ಇಂಡಿ, ಕೃಷಿ ವಿಜ್ಞಾನ ಕೇಂದ್ರ ವಿಜಯಪುರ, ಭೀಮಾಶಂಕರ ಸಕ್ಕರೆ ಕಾರ್ಖಾನೆ ಮರಗೂರ, ಶಾಂತೇಶ್ವರ ವಿವಿಧೋದ್ದೇಶಗಳ ಸಹಕಾರಿ ಸಂಘ ಹೊರ್ತಿ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಕಬ್ಬಿನ ಬೆಳೆ ಕ್ಷೇತ್ರೋತ್ಸವ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಣ್ಣಿನ ಫಲವತ್ತತೆ ಕಾಪಾಡಿ ಆಧುನಿಕ ಪದ್ಧತಿಯ ಡ್ರಿಪ್ ನೀರಾವರಿ ಪದ್ಧತಿ ಅಳವಡಿಸಿ ಕಬ್ಬಿನ ಇಳುವರಿ ಹೆಚ್ಚಿಸಲು ಸಾಧ್ಯವಾಗುತ್ತದೆ. ಒಂದು ಎಕರೆ ಪ್ರದೇಶದಲ್ಲಿ 40 ಸಾವಿರ ಸಸಿ ನೆಡಬೇಕು. ಒಂದು ಸಸಿ ಎರಡರಿಂದ ಮೂರು ಕಿಲೋ ಆಗುವಂತೆ ನೋಡಿಕೊಳ್ಳಬೇಕು. ಆಗ ಕಬ್ಬಿನ ಅಧಿಕ ಇಳುವರಿ ಬರುತ್ತದೆ ಎಂದರು.

ವಿಜಯವಾಣಿ ಚಿತ್ರ

ಇಂಡಿ ತಾಲೂಕಿನ ಲಚ್ಯಾಣ ಗ್ರಾಮದ ಅಹಿರಸಂಗ ರಸ್ತೆಯ ಹೊಲದಲ್ಲಿ ಹಮ್ಮಿಕೊಂಡ ಕಬ್ಬಿನ ಬೆಳೆ ಕ್ಷೇತ್ರೋತ್ಸವ ಹಾಗೂ ವಿಚಾರ ಸಂಕಿರಣವನ್ನು ಶಾಸಕ ಯಶವಂತರಾಯಗೌಡ ಪಾಟೀಲ, ವಿಠ್ಠಲ ಕಟಕದೊಂಡ ಉದ್ಘಾಟಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಶಿವಶಂಕರ ಮೂರ್ತಿ, ಪ್ರಗತಿಪರ ರೈತ ಎಂ.ಆರ್. ಪಾಟೀಲ, ಬಸವರಾಜ ಸಾಹುಕಾರ, ಶ್ರೀಮಂತ ಇಂಡಿ, ಕೃಷಿ ಇಲಾಖೆ ಮಹಾದೇವಪ್ಪ ಏವೂರ ಮತ್ತಿತರರಿದ್ದಾರೆ.